ಪದಬಂಧ



ಎಡದಿಂದ ಬಲಕ್ಕೆ:

1. ಅಭ್ಯಾಗತನಂತೆ ಆತನದು ಒಳ್ಳೆಯ ನಟನೆ (4)
3. ಬಹುದೂರದಲ್ಲಿದೆ ಆ ನಾರಾಯಣ ಕ್ಷೇತ್ರ (3)
4. ಜನ ಎಂತಹರೇ ಆಗಲಿ, ಜೋಪಾನ ಇರಲಿ (3)
6. ಕಳ್ಳನ ತಮ್ಮನ ಜೊತೆಗೆ ಇದೆಂಥ ಸ್ನೇಹ? (4)
7. ಬಳಕೆಗೆ ಪುನಃ ಬರುವುದಿಲ್ಲ ಬಿಡಿ, ಈ ಬರೆವ ವಸ್ತು (3)
9. ನರಕಾಸುರನ ಹಿಡಿತದಲ್ಲಿದೆ ಭಾರೀ ಅರಣ್ಯ (3)
11. ಧರ್ಮ ರಾಹಿತ್ಯದಿಂದಾಗಿ ಇಂಥ ಕೆಟ್ಟ ಕೊನೆ (3)
13. ಹಗ್ಗವನ್ನು ಹೀಗೆ ಕಟ್ಟುವ ಕ್ರಮ ಅರ್ಥವಾಗುವಂತಿಲ್ಲ (3)
15. ಬತ್ತ ವಿತರಿಸುವ ಸುದ್ದಿಯನ್ನು ಎಲ್ಲೆಡೆ ಹರಡು (4)
17. ಕಾದಾಡಿ ಬಂದದಕ್ಕೆ ಬಳುವಳಿ–ಬಾಳೆಹಣ್ಣು (3)
18. ರಾಣಿಗೂ ಬೇಕು, ಬೀಸುಗತ್ತಿಯಿಂದ ರಕ್ಷಿಸುವ ಶಸ್ತ್ರ (3)
19. ಕ್ಷಣಗಳಲ್ಲೇ ಪ್ರತ್ಯಕ್ಷವಾಯಿತು 'ದೇವತಾ ಗುಂಪು (4)

ಮೇಲಿಂದ ಕೆಳಕ್ಕೆ:

1. ಅಕ್ಕರೆ ಕಮ್ಮಿಯಾಗದಿರಲೆಂದು ಕೋರಿಕೆ (3)
2. ಕೈಗೊಂಡ ಯೋಜನೆಯ ಯಶಸ್ಸಿಗೆ ಯಾಗ–ಹೋಮ (3)
3. ಹಳಬರೇ ಇಲ್ಲಿ ಅಧಿಕ, ವಿಪರೀತ (3)
5. ನೆರಳಿಗೆಂದು ಬಂದವನಿಗೆ ತಾವರೆ ಏಕೆ? (3)
7. ದೂರ ದೂರಿಂದ ಬರುವ ವೇಳೆಗೆ ಎಲ್ಲ ಖಾಲಿ (3)
8. ಪಥ ತಪ್ಪಿ ನಡೆದು ಪರಾಜಿತನಾದ (3)
9. ಕೆಳಗಿಳಿದು ಬರುವವೇಳೆಗೆ ಕಂಡದ್ದು ಕಪ್ಪು ಸರ್ಪ (3)
10. ವೇದನೆಯನ್ನು ಪರಿಹರಿಸುವ ಈ ತಂತ್ರ ಹೊಸದು (3)
12. ಕಾರಂಜಿಯ ಬಳಿ ಗಾಳಿ ತಗಲಿದರೇ ಹತ್ತಿಕೊಳ್ಳುವ ವಸ್ತು (3)
14. ಹರಿವಾಣದ ಮುಂದೆ ಜಿಂಕೆ ಬಂದಿದೆ ನೋಡಿ (3)
15. ಬಳೆಯನ್ನೇಕೆ ತೊಟ್ಟ ಆ ಬೆಳ್ಳನ್ನ ವ್ಯಕ್ತಿ (3)
16. ಎಲ್ಲರಿಗೂ ಗೆಣಸು ಹಂಚಿದ್ದು ಒಳ್ಳೆಯ ಸ್ವಭಾವ ತಾನೇ?

## ಪದಬಂಧ 04-04-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಷ್ಠಾನ; 3. ಪ್ರಮಾಣ; 4. ಗಲೀಜು; 6. ಕನವರ; 7. ಹೊರತು; 9. ಅಂಕಿತ; 11. ದುರಂತ; 13. ಕೆಸರು; 15. ಅನುಮತಿ; 17. ಸುಮಾರು; 18. ರುಸುಮು; 19. ಹುರಿಯಾಳು.

ಮೇಲಿಂದ ಕೆಳಕ್ಕೆ:

1. ಅಣಕ; 2. ನಗರ; 3. ಪ್ರಹಾರ; 5. ಜುಮಕಿ; 7. ಹೊಸದು; 8. ತುಳಿತ; 9. ಅಂಜಿಕೆ; 10. ತಳಿರು; 12. ರಂಜಿಸು; 14. ಸಲಾಮು; 15. ಅರುಹು; 16. ತಿರುಳು.

# ಪ್ರಶ್ನಾಂಕಣ

## ಸಾಗರ ಜೀವಿ-ಎಷ್ಟು ವಿಧ, ಪ್ರಭೇದ?

ಅದೆಲ್ಲ ಎಷ್ಟೇ ಇರಲಿ, ಒಂದಂಶ ಸ್ಪಷ್ಟ: 'ಸಾಗರ ಅತ್ಯಂತ ಪ್ರಶಸ್ತ ಜೀವಾವಾರ.' ಜೀವಿ ಪೋಷಕ ಲವಣ ಜಲಭರಿತ ಸಾಗರಾವಾರದ ವಿಸ್ತಾರ ಮತ್ತು ಗಾತ್ರ ಅನಂತ ಸದೃಶ. ಸ್ಥಿರ ಪರಿಸರದ, ಸ್ಥಿರ ತಾಪಮಾನದ, ಧಾರಾಳ ಆಹಾರದ ಸಾಗರ ಜೀವಾವಾರದಲ್ಲಿ ಸಹಜವಾಗಿಯೇ ಸಕಲ ವರ್ಗದ ಪ್ರಾಣಿಗಳು ಮತ್ತು ಕೆಲವಾರು ಬಗೆಯ ಸಸ್ಯಗಳೂ ನೆಲೆಸಿವೆ: 'ಮತ್ಸ್ಯಗಳು, ಮೃದ್ವಂಗಿಗಳು, ಸರೀಸೃಪಗಳು, ಕ್ರಸ್ಟೇಶಿಯನ್‌ಗಳು, ಹಕ್ಕಿಗಳು, ಸ್ತನಿಗಳು, ಸೂಕ್ಷ್ಮ ಸ್ವರೂಪದ ಪ್ಲಾಂಕ್ಟನ್‌ಗಳು, ಹವಳಗಳು, ಹುಳುಗಳು... ಕಡೆಗೆ ಮೈಕ್ರೋಬ್‌ಗಳು ಕೂಡ.

ಸಾಗರ ವಿಜ್ಞಾನಿಗಳು ಇತ್ತೀಚೆಗೆ ಧರೆಯ ಪಾರಾವಾರದ ಜೀವಿ ವಿಧಗಳ–ಜೀವ ಪ್ರಭೇದಗಳ ಗಣತಿ ಕಾರ್ಯವನ್ನು ಪೂರೈಸಿದ್ದಾರೆ. ಆ ಪ್ರಕಾರ ಲಭ್ಯವಾಗಿರುವ ಸಾಗರ ಜೀವಜಾಲದ ವೈವಿಧ್ಯ ಕುರಿತ ಪ್ರಮುಖ ಅಂಕಿ–ಅಂಶಗಳನ್ನು ಗಮನಿಸಿ:

* ಸಾಗರ ಜೀವಾವಾರದಲ್ಲಿ ಈವರೆಗೆ ಸ್ಪಷ್ಟವಾಗಿ ಗುರುತಿಸಿರುವ, ಹೆಸರಿಸಲಾಗಿರುವ ಜೀವಿ ಪ್ರಭೇದಗಳ ಸಂಖ್ಯೆ ಸುಮಾರು ಎರಡು ಲಕ್ಷ ಐವತ್ತು ಸಾವಿರ.

* ತಜ್ಞರ ಪ್ರಕಾರ ಈವರೆಗೆ ಪತ್ತೆಯಾಗಿರುವ ಪ್ರತಿಯೊಂದು ಪ್ರಭೇದಕ್ಕೂ ಕನಿಷ್ಠ ಮತ್ತೂ ನಾಲ್ಕು ಪ್ರಭೇದಗಳು ಅಜ್ಞಾತವಾಗಿ ಅಸ್ತಿತ್ವದಲ್ಲಿವೆ. ಆದ್ದರಿಂದ ಕಡಲ ಸಾಮ್ರಾಜ್ಯದಲ್ಲಿ ನೆಲೆಸಿರುವ ಜೀವಿ ಪ್ರಭೇದಗಳ ಒಟ್ಟೂ ಸಂಖ್ಯೆ ಹನ್ನೆರಡು ಲಕ್ಷಕ್ಕಿಂತ ಕಡಿಮೆ ಇಲ್ಲ!

* ಕಡಲಿನಾವಾರದಲ್ಲಿರುವ ಮೈಕ್ರೋಬ್‌ಗಳನ್ನು (ಎಂದರೆ ಸೂಕ್ಷ್ಮಾಣು ಜೀವಿಗಳನ್ನು) ಈ ಪಟ್ಟಿಗೆ ಸೇರಿಸಿಲ್ಲ. ಅವುಗಳದೇ ಪ್ರತ್ಯೇಕ ಒಂದು ಶತಕೋಟಿ ಪ್ರಭೇದಗಳಿರಬಹುದು!

* ಸಾಗರ ಜೀವಿಗಳ ಒಟ್ಟು ಪ್ರಭೇದಗಳಲ್ಲಿ ತೊಗಟೆ ಚರ್ಮದ ಜೀವಿಗಳದು ಶೇ. 20 ಭಾಗ. ಮೀನುಗಳು ಮತ್ತು ಮೃದ್ವಂಗಿಗಳದು ಶೇ. 30 ಭಾಗ. ಸ್ತನಿಗಳು, ಸರೀಸೃಪಗಳು ಮತ್ತು ಕಡಲ ಹಕ್ಕಿಗಳದು ಶೇ. ಎರಡು ಭಾಗ. ಇನ್ನುಳಿದದ್ದು ಇತರ ಜೀವಿ ವಿಧಗಳದು.

ಎಷ್ಟಿದ್ದರೇನು? ಮಿತಿ ಮೀರಿದ ಬೇಟೆ, ಮೇರೆ ಮೀರಿದ ಮಾಲಿನ್ಯಗಳ ಸೇರ್ಪಡೆ– ಇಂತಹ ಮನುಷ್ಯ ಮೂಲ ಅಕೃತ್ಯಗಳಿಂದ ಸಾಗರಗಳ ಜಲ–ಜೀವಜಾಲ ಹದಗೆಡುತ್ತಿರುವುದು ನಿಚ್ಚಳ.

■ ಎನ್. ವಾಸುದೇವ್

